# ಅಮ್ಮ ಎಂಬ ಕ್ಷಮಯಾಧರಿತ್ರಿ



**ನಿನ್ನ ಸ್ಪರ್ಶದಲ್ಲಿ, ನಿನ್ನ ಆಯಾಸದಲ್ಲಿ, ನೀ ಬಿಡುವ ಉಸಿರಿನಲ್ಲಿ, ನೀ ನಡೆವ ಹೆಜ್ಜೆಯಲಿ, ನೀ ಮಲಗೋ ಭಂಗಿಯಲಿ, ನೀ ತಿನ್ನೋ ಆಹಾರದಲಿ, ನಿನ್ನ ಹೆಣ್ತನದ ಮಂದಹಾಸದಲಿ ಪ್ರತಿ ಕ್ಷಣ ನಾನು ಕಾಣ್ತಾ ಇದ್ದೆ. ನಿನ್ನ ಮೂಲಕ ಎಲ್ಲರನ್ನು ನಾ ನೋಡ್ತಾ ಇದ್ದೆ. ನೀನು ಪ್ರೀತಿಸುವ ಎಲ್ಲರನ್ನು ನಾನು ಪ್ರೀತಿಸ್ತಾ ಇದ್ದೆ.**

■ ಮಂಜುನಾಥ ಮ. ಜುನಗೊಂಡ

**ಪ್ರೀತಿಯ ಅಮ್ಮನಿಗೆ,**

ಅಮ್ಮಾ ಹೇಗಿದ್ದೀಯಾ? ನಾನು ಇಲ್ಲದೆ ನೀನು ಹೇಗಿರ್ತಿಯಾ ಅಂತ ನಂಗೆ ಗೊತ್ತು. ನಿನಗೆ ನನ್ನ ನೆನಪು ತುಂಬಾ ಆಗ್ತಾ ಇದೆ ಅಂತ ಅರ್ಥ ಆಗ್ತಿದೆ. ಅದಕ್ಕಾಗಿಯೇ ನಾನು ಈ ಪತ್ರ ಬರೀತಾ ಇರೋದು. ನಾನು ನಿನಗೆ ಇದನ್ನು ಬರೆಯುವ ಕ್ಷಣದಲ್ಲಿ ನಿನಗೆ ನನ್ನ ಮೇಲಿದ್ದ ಪ್ರೀತಿ, ನನಗೆ ಬದುಕು ನೀಡಲು ನೀ ಪಟ್ಟ ಕಷ್ಟ, ಉಂಡಂತ ನೋವು, ಹಾಕಿದ ಕಣ್ಣೀರು, ಸುರಿಸಿದ ಬೆವರು, ಹರಿಸಿದ ರಕ್ತ, ಅನುಭವಿಸಿದ ಯಾತನೆ, ಒಡಲೊಳಗಿನ ವೇದನೆ ಎಲ್ಲವೂ ಒಂದು ಬಾರಿ ನನ್ನ ಕಣ್ಣ ಮುಂದೆ ಹಾಗೆ ಅನಾವರಣಗೊಂಡು ನನ್ನನ್ನೇ ಕಣ್ಣೀರಾಗಿಸಿ ಬಿಟ್ಟವಮ್ಮ. ಅದಕ್ಕೆ ಹೇಳೋದು ನೀನು ದೇವತೆ. ಇಷ್ಟೆಲ್ಲ ವೇದನೆಗಳನ್ನು ಸಹಿಸಿಕೊಂಡು ಅದು ಹೇಗೆ ನೀನು ನಗ್ತಾ ಇರೋದಕ್ಕೆ ಸಾಧ್ಯವಾಗುತ್ತೋ ನನಗಂತು ತಿಳಿತಾ ಇಲ್ಲ. ಅಂಥ ಅಧ್ಬುತ ಶಕ್ತಿ ನಿನ್ನಲ್ಲಿ ಅಲ್ಲದೇ ಬೇರೆ ಯಾರಲ್ಲಿ ಇರೋದಕ್ಕೆ ಸಾಧ್ಯ ಹೇಳು.

ಅದಕ್ಕೆ ನಿನ್ನನ್ನು ಕ್ಷಮಯಾಧರಿತ್ರಿ ಅನ್ನೋದು. ನಾನು ನಿನ್ನ ಒಡಲೊಳಗೆ, ಬಸಿರೆಂಬ ಗರ್ಭ ಗುಡಿಯೊಳಗೆ ಬೆಚ್ಚಗಿದ್ದೆ. ಹೊರಗಡೆ ಕೊರೆಯುವ ಚಳಿ. ಆದರೆ ನನಗೆ ಅದರ ಸಣ್ಣ ಸುಳಿವು ಇರದಂತೆ ಕಾಪಾಡಿದೋಳು ನೀನು. ಹಸಿವು ಎಂದು ಒಳಗೆ ನಿನಗೆ ಸ್ಪರ್ಶಿಸಿದರೆ ಸಾಕು, ಬಿಸಿ ಬಿಸಿ ಊಟ ನೀಡಿ ಸಲಹಿದವಳು ನೀನು. ಅದೆಷ್ಟೋ ಬಾರಿ ನಾನು ಹೊಟ್ಟೆಯೊಳಗೆ ಆಟವಾಡಲು ಹೋಗಿ ನಿನಗೆ ಕಾಲು ತಾಗಿಸಿದ್ದೆನೆ; ಆದರೆ ಕೋಪಿಸಿಕೊಳ್ಳುವ ಬದಲು ನಾನು ನಿನ್ನಲ್ಲಿ ಬೆಳೆಯುತ್ತಿರುವ ಪರಿಯನ್ನು ಇತರರಿಗೆ ಹೇಳಿ ಖುಷಿ ಪಟ್ಟೋಳು ನೀನು. ಒಳಗೆ ಕುಳಿತು ಅದೆಷ್ಟೋ ಕುಚೇಷ್ಟೆಗಳನ್ನು ಮಾಡಿದರೂ ಸಹಿಸಿಕೊಂಡು ನಕ್ಕಳವಳು ನೀನು. ಅದಕ್ಕೆ ನೀನು ಅಂದ್ರೆ ನಂಗೆ ತುಂಬಾ ಇಷ್ಟ.

ನನ್ನ ಅಣ್ಣ ಬಂದು ಅಮ್ಮ ಅಂಥ ನಿನ್ನನ್ನು ಅಪ್ಪಿಕೊಳ್ಳಲು ಓಡಿ ಬಂದರೆ ಕೊಸರಿ ದೂರ ಸರಿಯುತ್ತಿದ್ದೆ. ಯಾಕಮ್ಮಾ ಅಂತ ಕೇಳಿದರೆ ನನಗೆ ನೋವಾಗುವ ಭಯವನ್ನು ತಿಳಿಸಿ ಹೇಳುತ್ತಿದೆ. ನನಗೂ ಅಣ್ಣನ ಜೊತೆ ಆಟವಾಡುವ ಕಾತುರ ಇತ್ತು. ಯಾವಾಗ ಹೊರಗಡೆ ಬರುತ್ತೇನೋ ಎನ್ನುವ ಆತುರ ಮನೆ ಮಾಡಿತ್ತು. ಅಪ್ಪ, ಅಜ್ಜ, ಅಜ್ಜಿ, ಅತ್ತೆ ಎಲ್ಲರೂ ಅಣ್ಣನ ಮೇಲೆ ತೋರಿಸುತ್ತಿದ್ದ ಪ್ರೀತಿ ಕಂಡು ನನಗೂ ಆಶೆಯಾಗುತ್ತಿತ್ತು. ಯಾವಾಗ ನಾನು ಹೊರಗೆ ಬರುತ್ತೇನೋ ಅವರ ಪ್ರೀತಿಯ, ಅಕ್ಕರೆಯ ಜೇನನ್ನು ಸವಿಯುತ್ತೇನೋ ಎಂದು ಅಂದುಕೊಳ್ಳುತ್ತಿದ್ದೆ. ನಿನಗೆ ಗೊತ್ತಾ ಅಮ್ಮಾ? ನಾನು ಒಳಗಡೆ ಇದ್ದಾಗಲೇ ಕನಸು ಕಾಣುವುದಕ್ಕೆ ಶುರುವಿಟ್ಟುಕೊಂಡಿದ್ದೆ. ಅದೇನು ಗೊತ್ತಾ? ನಿನ್ನ ಮಡಿಲೆಂಬ ಮಹಾಮನೆಯಲ್ಲಿ, ಕೈತುತ್ತೆಂಬ ಅಮೃತದ ಸಿಹಿಯಲಿ, ಪ್ರೀತಿಯೆಂಬ ಸ್ವರ್ಗದಲಿ, ಜೋಗುಳ ಎಂಬ ಕೋಗಿಲೆ ಸ್ವರದಲಿ, ಅಕ್ಕರೆ ಎಂಬ ಆರೈಕೆಯಲಿ, ಸಕ್ಕರೆ ಎಂಬ ನಿನ್ನ ಮುತ್ತಿನಲ್ಲಿ, ರೇಶ್ಮೆ ಎಂಬ ನಿನ್ನ ಸ್ಪರ್ಶದಲ್ಲಿ, ಆತ್ಮೀಯತೆ ಎಂಬ ನಿನ್ನ ಆಲಿಂಗನದಲಿ, ತಾಯ್ತನವೆಂಬ ನಿನ್ನ ತೋಳ್ಬಂದನದಲ್ಲಿ, ನಾನು ನನ್ನನ್ನೇ ಮರೆತು ಇರಬೇಕೆನ್ನುವ ಆಶೆಗಳು ಆಗಲೇ ನನ್ನಲ್ಲಿ ಮನೆ ಮಾಡಿದ್ದವು.

ನಾನು ಯಾರೆಂಬುದು ತಿಳಿಯುವ ಮೊದಲೇ, ನಾನು ಹೇಗಿದ್ದೇನೆ ಎಂದು ಅರಿಯುವ ಮೊದಲೇ, ನನ್ನ ರೂಪ ಯಾವುದು ಎಂದು ಗೊತ್ತಾಗುವ ಮೊದಲೇ, ನನ್ನ ಗುಣ ಎಂತದು ಎಂದು ಗುರುತಾಗುವ ಮೊದಲೇ, ನನ್ನ ನೋಡದೇನೆ ನಿನ್ನ ಜೀವಕ್ಕಿಂತ ಜಾಸ್ತಿ ನನ್ನ ಪ್ರೀತಿ ಮಾಡ್ತಾ ಇರೋದಕ್ಕೆನೆ ಹೇಳೋದು ಅಲ್ವ ಅಮ್ಮಾ ಕುರುಡು ಪ್ರೀತಿ ಅಂತ. ಜಗತ್ತಲ್ಲಿ ಎಲ್ಲಾ ಗೊತ್ತಾದ ಮೇಲೆ ಪ್ರೀತಿ ಮಾಡ್ತಾರೆ ಯಾಕೆ ಅಂತ ಕೇಳಿದ್ರೆ ಪ್ರೀತಿ ಕುರುಡು ಅಂತಾರೆ. ಆದ್ರೆ